ಕೆ.ಎಂ.ಎಫ್.ನಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರು.

133 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಎಂ.ಎಫ್.ನಲ್ಲಿ ಕೆಲಸ ಮಾಡುವ ನೌಕರರ ಸಂಖ್ಯೆ ಎಷ್ಟು.

ಆ) ಇವರ ಪೈಕಿ ಎಷ್ಟು ಜನ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರು,

ಇ) ಈ ಗುತ್ತಿಗೆ ನೌಕರರನ್ನು ಖಾಯಂ ಗೊಳಿಸಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 774 (733 ಖಾಯಂ ನೌಕರರು).

ಆ) 41 ಮಂದಿಸಂಚಿತ ವೇತನ ಮೇಲೆ.

ಇ) ಇದರ ಬಗ್ಗೆ ಈವರೆಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರಗಳನ್ನು ಒದಗಿಸಿದ್ದಾರೆ. ಅದರಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಸಂಖ್ಯೆ 41 ಜನ ಎಂದು ಕೊಟ್ಟಿದ್ದಾರೆ. ಕೆ.ಎಂ.ಎಫ್ ಗೆ ಈ 41 ಜನರ ಅವಶ್ಯಕತೆ ಇದ್ದರೆ ಅವರನ್ನು ರಿಕ್ರೂಟಿಮೆಂಟ್ ಮಾಡಿಕೊಳ್ಳಬಹುದಾಗಿತ್ತು. ಅಲ್ಲಿ ಕಂಟ್ರ್ಯಾಕ್ಟ ಬೇಸಿಸ್ ಮೇಲೆ ಬೇಕು ಬೇಕಾದವರನ್ನೆಲ್ಲ ಸೇರಿಸಿಕೊಂಡಿದ್ದಾರೆ ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೆ ಅದು ಯಾವಾಗ ಆಯಿತೆಂದು ನನಗೆ ಗೊತ್ತಿಲ್ಲ. ನಾನು ಮಾನ್ಯ ಬಚ್ಚೇಗೌಡರ ಮೇಲೆ ಯಾಗಲಿ, ಸರ್ಕಾರದ ಮೇಲೆಯಾಗಲಿ ಹೇಳುವುದಿಲ್ಲ. ನೀವು ಯಾವಾಗ ಕಂಟ್ರಾಕ್ಟ ಬೇಸಿಸ್ ಮೇಲೆ ತೆಗೆದುಕೊಂಡಿದ್ದೀರಿ ಅವರನ್ನು ರಿಕ್ರೂಟ್ ಮೆಂಟ್ ಮಾಡಿ ಏಕೆ ತೆಗೆದುಕೊಳ್ಳಬಾರದಿತ್ತು. ಇವರನ್ನು ಕನ್ ಫರ್ಮ ಮಾಡುತ್ತೀರೋ ಹಾಗೂ ಕನ್ ಫರ್ಮ ಮಾಡುವಾಗ ರೋಸ್ಟರ್ ಸಿಸ್ಟಂ ಅನ್ನು ಫಾಲೋ ಮಾಡುತ್ತೀರೋ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಲಿಯಲ್ಲಿ ಒಟ್ಟು 7 ಘಟಕಗಳಲ್ಲಿ 733 ಜನ ನೌಕರರು ಖಾಯಂ ಆಗಿ ಕೆಲಸ ಮಾಡುತ್ತಿದ್ದಾರೆ. ಹಾಗೂ ಕಳೆದ ಮೂರು ವರ್ಷಗಳಿಂದ ಸಂಚಿತ ವೇತನದಲ್ಲಿ 41 ಜನ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಖಾಯಂ ನೌಕರರಿಗೆ ಕೊಡುವುದಕ್ಕಿಂತ ಒಂದು ಹತ್ತು ರೂಪಾಯಿ ಕಡಿಮೆ ಸಂಬಳ ಕೊಡುತ್ತಿದ್ದಾರೆ, ಮತ್ತು ಮಾನ್ಯ ಸದಸ್ಯರು ಕೇಳಿದಂತೆ ಗುತ್ತಿಗೆ ಆಧಾರದ ಮೇಲೆ ಇರತಕ್ಕಂಥ ಕಾರ್ಮಿಕರು ಎಂದರೆ ಕಂಟ್ರಾಕ್ಟರ್ ಅವರ ಹತ್ತಿರ ಕೆಲಸ ಮಾಡುವವರು ಸುಮಾರು 307 ಜನ ಇದ್ದಾರೆ. ಅವರನ್ನು ಯಾವಾಗ ಖಾಯಂ ಗೊಳಿಸುತ್ತೀರಿ ಎನ್ನುವ ಉದ್ದೇಶ ಇರಬೇಕು. ಅವರು ಕಂಟ್ರಾಕ್ಟರ್ ಹತ್ತಿರ ಕೆಲಸ ಮಾಡುವುದರಿಂದ ಅವರು ನೇರವಾಗಿ ನಮಗೆ ಸಂಬಂಧಪಿಲ್ಲ. ಕಂಟ್ರಾಕ್ಟರುಗಳನ್ನು ಪ್ರತಿವರ್ಷ ನಾವು ನೇಮಕ ಮಾಡಿಕೊಳ್ಳುತ್ತೇವೆ. ಆ ಕಂಟ್ರಾಕ್ಟರ್ ಅವರಿಗೆ ಹಣ ಕೊಡುತ್ತಾರೆ. ಆದುದರಿಂದ ಅವರನ್ನು

ತೆಗೆದುಕೊಳ್ಳುವಂತಹ ಪ್ರಶ್ನೆಯಿಲ್ಲ. ನಾವು ಕರೆದಾಗ ಮಾತ್ರ ಅವರು ಅರ್ಜಿ ಹಾಕಿಕೊಳ್ಳಬಹುದು, ಅವರನ್ನು ತೆಗೆದುಕೊಳ್ಳುತ್ತೇವೆ. ಈ ಸಂಚಿತ ವೇತನ ತೆಗೆದುಕೊಂಡು ಕೆಲಸ ಮಾಡುತ್ತಿರುವ 41 ಜನರನ್ನು ಮುಂದೆ ತೆಗೆದುಕೊಳ್ಳುವಂತಹ ಸಂದರ್ಭ ಬಂದಾಗ ಅವರಿಗೆ ಆದ್ಯತೆ ಕೊಟ್ಟು ತೆಗೆದುಕೊಳ್ಳುತ್ತೇವೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ 41 ಜನರ ಅವಶ್ಯಕತೆ ಇದೆ ಎಂದು ತೆಗೆದುಕೊಂಡಿದ್ದೀರಿ. ಆದುದರಿಂದ ಇವರನ್ನು ರಿಕ್ರೂಟ್‌ಮೆಂಟ್ ಮಾಡಿ ಏಕೆ ತೆಗೆದುಕೊಳ್ಳುವುದಿಲ್ಲ ಎಂದು ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಮೂರು ವರ್ಷಗಳ ಹಿಂದೆ ತೆಗೆದುಕೊಂಡವರು ಕೆಲವರು ಕ್ವಾಲಿಟಿ ಕಂಟ್ರೋಲ್‌ಗೆ ಬೇಕಾಗಿರತಕ್ಕಂಥಾದ್ದು, ಫೀಲ್ಡ್ ಸೇಲ್ಸ್‌ಗೆ ಬೇಕಾಗಿರತಕ್ಕಂಥವನ್ನು ಡ್ರೈವರ್ಸ್, ಎಲೆಕ್ಟ್ರೀಷಿಯನ್ಸ್ ಮತ್ತು ಕಂಪ್ಯೂಟರ್ ಪ್ರೋಗ್ರಾಂ ಮಾಡುವಂತಹವರು ಕೆಲವು ಅವಶ್ಯಕತೆ ಇರುವವರನ್ನು ನಾವು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ನಿಂದ ತರಿಸಿಕೊಂಡು ಇಟ್ಟುಕೊಳ್ಳುತ್ತೇವೆ. ಮುಂದೆ ಅವರಿಗೆ ಅವಕಾಶಗಳು ಸಿಕ್ಕಾಗ ಅವರನ್ನು ರೆಗ್ಯುಲರೈಸ್ ಮಾಡುತ್ತೇವೆ ತಾವು ರೋಸ್ಟರ್ ಬಗ್ಗೆ ಕೇಳಿದಿರಿ, ರೋಸ್ಟರ್ ಪದ್ಧತಿಯನ್ನು ಅಳವಡಿಸಿ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಇದ್ದಾರೆ. ಅನೇಕ ಇಲಾಖೆಗಳಲ್ಲಿ ಈ ಸಮಸ್ಯೆ ಇದೆ. ದಿನಗೂಲಿ ನೌಕರರನ್ನು, ಗುತ್ತಿಗೆ ನೌಕರರನ್ನು ಖಾಯಂ ಮಾಡಬೇಕು ಎನ್ನುವುದರ ಬಗ್ಗೆ ಇಡೀ ರಾಜ್ಯದಲ್ಲಿ ಅಭಿಪ್ರಾಯ ಇದ್ದು ಇದರ ಬಗ್ಗೆ ಸರ್ಕಾರ ಒಂದು ನಿಲುವು ತೆಗೆದುಕೊಂಡರೆ ಸರಿಹೋಗುತ್ತದೆ. ಏಕೆಂದರೆ ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿದೆ, ಆದರೂ ಕೂಡ ಆ ತೀರ್ಪಿನ ಬಗ್ಗೆ ಸರ್ಕಾರ ಏನೂ ಗಮನ ಕೊಟ್ಟಿಲ್ಲ. ಅಲ್ಲಿರುವಂತಹ ನೌಕರರು, ಧರಣಿ, ಉಪವಾಸ ಮಾಡುತ್ತಾರೆ, ಆದರೆ ಅಮರಣಾಂತರ ಉಪವಾಸ ಮಾಡಿದಾಗ ಮಾತ್ರ ಸರ್ಕಾರ ಸ್ವಲ್ಪ ಆ ಇಲಾಖೆ ಬಗ್ಗೆ ಗಮನ ಕೊಡುತ್ತದೆ. ಇಡೀ ರಾಜ್ಯದಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಗುತ್ತಿಗೆ ನೌಕರರು ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವು ಏನು ತೆಗೆದುಕೊಳ್ಳುತ್ತದೆ ಎಂದು ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಸರ್ಕಾರದ ಪಾಲಿಸಿ ಬಗ್ಗೆ ಏನೂ ಕನ್ ಫ್ಯೂಷನ್ ಇಲ್ಲ. ಆದರೆ ಸುಪ್ರೀಂ ಕೋರ್ಟ್ ಆರ್ಡರ್‌ಗೆ ನಮ್ಮ್ಯಾವ್ಯಾವ ಇಲಾಖೆಗಳಿಗೆ ಅನ್ವಯಿಸುತ್ತದೆ, ಯಾವ ಇಲಾಖೆಗಳಲ್ಲಿ ಅನ್ವಯಿಸುವುದಕ್ಕಾಗುವುದಿಲ್ಲ ಎನ್ನುವ ಬಗ್ಗೆ ವಿವರಗಳನ್ನು ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನನ್ನ ಪ್ರಶ್ನೆ ಅದಲ್ಲ. ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿರುವಂತಹ ಇಲಾಖೆಗಳ ಬಗ್ಗೆ ಕೂಡ ಸರ್ಕಾರ ದಿನಗೂಲಿ ನೌಕರರನ್ನು ಇನ್ನು ಖಾಯಂ ಮಾಡಿಲ್ಲ. ಅವರನ್ನು ಖಾಯಂ ಮಾಡುತ್ತೀರಾ? ಉದಾಹರಣೆಗೆ ನಗರ ಪಾಲಿಕೆ ಸಭೆ ಇದೆ, ಲೋಕೋಪಯೋಗಿ ಇದೆ, ಅರಣ್ಯ ಇಲಾಖೆ ಇದೆ, ಅನೇಕ ಇಲಾಖೆ ಇವೆ, ಅದರಲ್ಲೂ ವಿಶೇಷವಾಗಿ ಪೌರಾಡಳಿತ ಇಲಾಖೆಗ ಬಗ್ಗೆ ಸ್ಪಷ್ಟವಾಗಿ ಸುಪ್ರೀಂ ಕೋರ್ಟ್ ದಿನಗೂಲಿ ನೌಕರರನ್ನು ಖಾಯಂ ಮಾಡಬೇಕು ಎಂದು ತೀರ್ಪು

ಕೊಟ್ಟಿದೆ 10 ವರ್ಷ ಮಾಡಿದಮೇಲೂ ಖಾಯಂ ಮಾಡಿಲ್ಲ. ಅದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವು ಏನು?

ಶ್ರೀ ಎಂ.ಸಿ. ನಾಣಯ್ಯ : ದಿನಗೂಲಿ ನೌಕರರ ಬಗ್ಗೆ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಗ್ಯಾಂಗ್ ವರ್ಕರ್ಸ ಯಾರಿದ್ದರು ಅವರಿಗೆ ಸಂಬಂಧಪಟ್ಟ ಹಾಗೆ ಸುಪ್ರೀಂ ಕೋರ್ಟನವರು ಒಂದು ಆರ್ಡ್ಲೆ ಮಾಡಿರತಕ್ಕಂಥಾದ್ದು ಇದೆ. 'ಆ ಒಂದು ಆರ್ಡ್ಲೆ ಪ್ರಕಾರ ಪಿ.ಡಬ್ಲ್ಯೂ.ಡಿ. ಇಲಾಖೆಯವರು ಆ ಗ್ಯಾಂಗ್ ವರ್ಕರ್ಸಗೆ ಒಂದು ಫಿಟ್ ಮೆಂಟ್ ಅನ್ನು ಕೊಟ್ಟು ಒಂದು ಹಂತದಲ್ಲಿ ಅವರನ್ನೆಲ್ಲಾ ಮಾಡಿದ್ದಾರೆ. ಬಾಕಿ ಇರತಕ್ಕಂಥ ದಿನಗೂಲಿ ನೌಕರರ ಬಗ್ಗೆ ಈಗಿರತಕ್ಕಂಥಾದ್ದರಲ್ಲಿ 240 ದಿವಸ ಯಾವುದಾದರೂ ಒಂದು ವರ್ಷದಲ್ಲಿ ಕಂಟಿನ್ಯೂಯಸ್ ಆಗಿ ಖಾಲಿ ಇರತಕ್ಕಂಥ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವವರು ಇದ್ದರೆ, ಆ ಇಲಾಖೆಯಲ್ಲಿ ಹೊಸದಾಗಿ ರಿಕ್ರೂಟ್ ಮೆಂಟ್ ಮಾಡುವಂತಹ ಸಂದರ್ಭ ಬಂದಾಗ ರೋಸ್ಟರ್ ನಿಯಮಕ್ಕೊಳಪಟ್ಟು ಅವರಿಗೆ ಆದ್ಯತೆ ಕೊಡಬೇಕು ಎಂದು ಇದೆ. ಅದನ್ನು ಸರ್ಕಾರ ಅನುಸರಿಸುತ್ತಿದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ರೋಸ್ಟರ್ ಪದ್ಧತಿಯನ್ನು ಫಾಲೋ ಮಾಡುತ್ತಾರೊ ಇಲ್ಲವೋ ಎನ್ನುವ ಪ್ರಶ್ನೆಯನ್ನು ನಾನು ಕೇಳಬೇಕಾಗಿತ್ತು, ಅದಕ್ಕೆ ಮಾನ್ಯ ಮಂತ್ರಿಗಳು ಫಾಲೋ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟರು. ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತ್ತು.

ಪಶು ಚಿಕಿತ್ಸಾ ಕೇಂದ್ರಗಳಿಗೆ ಔಷಧ ಪೂರೈಕೆ.

134 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಸಾಲಿನ ಪಶುಚಿಕಿತ್ಸಾ ಕೇಂದ್ರಗಳಿಗೆ ಔಷಧಿ ಪೂರೈಸಲು ನಿಗಧಿ ಮಾಡಿದ ಹಣ ಎಷ್ಟು, ಹಾಗೂ ಆ ಪೈಕಿ 31-1-96ರ ವರೆಗೆ ವಿರ್ಚಾದ ಹಣ ಎಷ್ಟು?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಪಶುಪಾಲನಾ ಇಲಾಖೆಯ ರಾಜ್ಯ ವಲಯದಲ್ಲಿ ರೂ. 4.05 ಕೋಟಿ.

ಆ) ಈ ವರೆವಿಗೂ ರೂ. 3,45,42,663,00 ವಿರ್ಚಾಗಿದೆ.

ಶ್ರೀ ಯು.ಬಿ.ಬಣಕಾರ್ : ಮಾನ್ಯ ಅಧ್ಯಕ್ಷರೇ, 1995-96ರಲ್ಲಿ ಪಶು ಚಿಕಿತ್ಸಾ ಕೇಂದ್ರಗಳಿಗೆ ಔಷಧ ಒದಗಿಸಲು ನಿಗದಿ ಮಾಡಿದಂತಹ ಹಣ 4 ಕೋಟಿ 5 ಸಾವಿರ ರೂಪಾಯಿಗಳಲ್ಲಿ ಇದುವರೆಗೂ 3 ಕೋಟಿ 45 ಲಕ್ಷ ರೂಪಾಯಿಗಳನ್ನು ವಿರ್ಚು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದ ಪಶು ಚಿಕಿತ್ಸಾಲಯಗಳಲ್ಲಿ ಈ ಬಗ್ಗೆ ವಿಚಾರಮ್ಮಾಡಿದರೆ ಕೇವಲ ಡೈರೆಕ್ಟರ್ ಕ್ವೋಟಾದಲ್ಲಿ ಫೆಬ್ರುವರಿಯಲ್ಲಿ ನೂರು ಪರ್ಸೆಂಟ್ ಔಷಧ ಪೂರೈಕೆಯಾಗಿದೆ. ನಾವು ವರ್ಷದ ಕೊನೇ ತಿಂಗಳಿನಲ್ಲಿ ಇದ್ದೇವೆ. ಪ್ರತಿವರ್ಷ ಏನು ತೊಂದರೆಯಾಗುತ್ತದೆಯೆಂದರೆ ವರ್ಷದ ಕೊನೆಯಲ್ಲಿ ಇವರು ಹಣ ವಿರ್ಚು ಮಾಡುವುದರಿಂದ ಇಡೀ ವರ್ಷ ಗ್ರಾಮೀಣ ಭಾಗದ ಪಶು ಚಿಕಿತ್ಸಾಲಯಕ್ಕೆ ಔಷಧ